ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು

ಇವರ ನ್ಯಾಯಾಲಯದಲ್ಲಿ

**MVC** 912/2021

ಪಿ ಡಬ್ಲು – 2

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಹೇಮಣ್ಣ |
| ತಂದೆ ಹೆಸರು | : | ಮಾಯಣ್ಣ |
| ವಯಸ್ಸು | : | **51** ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ ಸರ್ಕಾರಿ ಆಸ್ಪತ್ರೆ ಹಿರಿಯುರು |
| ವಾಸ | : | ಹಿರಿಯೂರು |

ಸಾಕ್ಷಿಯನ್ನು ದಿಃ **26.06.2025** ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.

**ಮುಖ್ಯ ವಿಚಾರಣೆ** : **ಅರ್ಜಿದಾರರ ಪರ ಶ್ರೀ ಸಿ ಎಂ ವಕೀಲರಿಂದಃ**

ನಾನು ಮಾರ್ಚ್ 2018 ರಿಂದ ಇಲ್ಲಿಯವರೆಗೆ ಹಿರಿಯೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿಃ09.12.2020 ರಂದು ಸುಮಾರು 6.40 ರಿಂದ 7.40 ಪಿ ಎಂ ರಲ್ಲಿ ರಂಗಸ್ವಾಮಿ ತಂದೆ ರುದ್ರಪ್ಪ ಇವರ ಮರಣೋತ್ತರ ಪರೀಕ್ಷೆ ನಡೆಸಿರುತ್ತೇನೆ. ಮರಣೋತ್ತರ ಪರೀಕ್ಷೆ ಮಾಡುವಾಗ ಅವರ ಎಡಗಾಲಿನ ಮೂಳೆ ಮುರಿದಿದ್ದು ಶಸ್ತ್ರ ಚಿಕಿತ್ಸೆಯಾಗಿ ಬ್ಯಾಂಡೇಜ್ ಇರುತ್ತದೆ. ರಂಗಸ್ವಾಮಿ ಇವರಿಗೆ ಕಾಲು ಮುರಿತದಿಂದ ಶಸ್ತ್ರ ಚಿಕಿತ್ಸೆ ಮಾಡಿದಾಗ ಅದರಿಂದ ಆದ ಇನ್ ಫೆಕ್ಷನ್ ನಿಂದ ತೊಂದರೆಯಾಗಿ ಅವರ ಸಾವು ಉಂಟಾಗಿರುತ್ತದೆ ಎಂದು ಕಂಡು ಬಂದಿರುತ್ತದೆ. ಸಾಕ್ಷಿ ಸದರಿ ಪಿ ಎಂ ವರದಿ ನಿಪಿ–6 ನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿ ಎಂ ಎಲ್ ಸಿ ವರದಿ ಪ್ರತಿ ಹಾಜರು ಪಡಿಸಿದ್ದು ಅದನ್ನು ನಿಪಿ–12 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ಪಿ ಎಂ ವರದಿಯಲ್ಲಿ ರಂಗಸ್ವಾಮಿ ಅಪಘಾತದಿಂದ ಉಂಟಾದ ಗಾಯಗಳಿಂದ ಮರಣ ಹೊಂದಿದ್ದಾರೆ ಎಂದು ನಾನು ನಮೂದಿಸಿಲ್ಲ. ಸ್ವಲ್ಪದಿನದ ಹಿಂದೆ ಮೂಳೆ ಮುರಿತವಾಗಿತ್ತು ಎಂದು ಕಂಡು ಬರುತ್ತದೆ. ಆದರೆ ಎಷ್ಟು ದಿನಗಳ ಹಿಂದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನಾನು ರಂಗಸ್ವಾಮಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ. ಇನ್ ಫೆಕ್ಷನ್ ಕಂಡು ಹಿಡಿಯಲು ಸುಮಾರು 4 ರಿಂದ 5 ಪರೀಕ್ಷೆಗಳು ಮಾಡಬೇಕು ಎಂದರೆ ನಿಜ. ಎಫ್ ಎಸ್ ಎಲ್ ವರದಿ ಪಡೆಯಬೇಕು ಎಂದರೆ ನಿಜ. ಎಫ್ ಎಸ್ ಎಲ್ ವರದಿ ಆಧಾರದ ಮೇಲೆ ಮರಣದ ಕಾರಣದ ಬಗ್ಗೆ ಅಂತಿಮ ವರದಿ ನೀಡಿಬೇಕು ಎಂದರೆ ನಿಜ. ಎಫ್ ಎಸ್ ಎಲ್ ವರದಿಯಿಂದಲೇ ಇಂತಹ ಕಾರಣಕ್ಕೆ ಮೃತಪಟ್ಟಿದ್ದಾರೆ ಎಂದು ಕಂಡು ಹಿಡಿಯಬಹುದು ಎಂದರೆ ನಿಜ . ಮರಣೋತ್ತರ ಪರೀಕ್ಷೆ ಮಾಡುವ ಸಮಯದಲ್ಲಿ ಇನ್ ಫೆಕ್ಷನ್ ಮೇಲ್ನೋಟಕ್ಕೆ ಕಂಡು ಬರುವುದಿಲ್ಲ ರಕ್ತದಲ್ಲಿ ಇರುತ್ತದೆ ಎಂದರೆ ನಿಜ. ಎಫ್ ಎಸ್ ಎಲ್ ವರದಿಗೆ ಯಾವುದೇ ರಕ್ತವನ್ನು ಪರೀಕ್ಷೆಗಾಗಿ ಕಳುಹಿಸಿರುವುದಿಲ್ಲ.

ರಂಗಸ್ವಾಮಿಯವರ ಕಿಡ್ನಿ ಸರಿ ಇತ್ತೊ ಇಲ್ಲವೋ ಎನ್ನುವುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ರಂಗಸ್ವಾಮಿಯವರು ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಮರಣೋತ್ತರ ಪರೀಕ್ಷೆಯನ್ನು ಕೇವಲ ಮೂಳೆ ಮುರಿತಕ್ಕೆ ಮಾತ್ರ ಪರಿಶೀಲಿಸಿರುತ್ತೇನೆ . ರಂಗಸ್ವಾಮಿಯವರು ಮರಣ ಹೊಂದಿರುವುದಕ್ಕೆ ಪಿ ಎಂ ವರದಿ ಬಿಟ್ಟು ಬೇರೆ ಯಾವುದೇ ಪರೀಕ್ಷೆ ಮಾಡಿಲ್ಲ ಎಂದರೆ ಸರಿ. ಮೃತ ರಂಗಸ್ವಾಮಿಯವರ ದೇಹದಲ್ಲಿ ಎಷ್ಟು ಪರ್ಸೆಂಟ್ ಇನ್ ಫೆಕ್ಷನ್ ಆಗಿದೆ ಎಂದು ಎಫ್ ಎಸ್ ಎಲ್ ವರದಿ ಮೇಲೆ ಕಂಡು ಹಿಡಿಯಬಹುದು . ಎಫ್ ಎಸ್ ಎಲ್ ವರದಿ ಇಲ್ಲದೇ ಮೃತ ರಂಗಸ್ವಾಮಿಯವರ ಕುಟುಂಬಕ್ಕೆ ಅನುಕೂಲ ಮಾಡಲು ಇನ್ ಫಕ್ಷನ್ ಆಗಿತ್ತು ಎಂದು ಸುಳ್ಳು ಪಿ ಎಂ ವರದಿ ನಮೂದಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಪಿ ಎಂ ವರದಿಯಲ್ಲಿ ರಂಗಸ್ವಾಮಿಯವರು ಎಷ್ಟು ದಿನಗಳ ಹಿಂದೆ ಮೃತ ಪಟ್ಟಿದ್ದರು ಎಂದು ಬರೆಯುವ ಅವಶ್ಯಕತೆ ಇರುವುದಿಲ್ಲ. ಎಷ್ಟು ದಿನದ ಹಿಂದೆ ಮೃತ ರಂಗಸ್ವಾಮಿಯವರಿಗೆ ಶಸ್ತ್ರ ಚಿಕಿತ್ಸೆಯಾಗಿತ್ತು ಎಂದು ಗೊತ್ತಿಲ್ಲ. ಶಸ್ತ್ರ ಚಿಕಿತ್ಸೆ ಆದ ಭಾಗದಲ್ಲಿ ಇನ್ ಫೆಕ್ಷನ್ ಕಂಡು ಬಂದಿರುವುದಿಲ್ಲ.

ಡಯಾಬಿಟಿಸ್ ಇರುವ ರೋಗಿಗೆ ಇನ್ ಫೆಕ್ಷನ್ ಇರುತ್ತದೆ ಎಂದರೆ ನಿಜ. ನಾನು ಯಾವುದೇ ಪರೀಕ್ಷೆಗಳನ್ನು ಮಾಡದೇ ಅರ್ಜಿದಾರರಿಗೆ ಸಹಾಯ ಮಾಡಲು ಇನ್ ಫೆಕ್ಷನ್ ಆಗಿ ರಂಗಸ್ವಾಮಿ ಮೃತ ಪಟ್ಟಿದ್ದಾರೆ ಎಂದು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಎಫ್ ಎಸ್ ಎಲ್ ಗೆ ಕಳುಹಿಸಲು ನನಗೆ ತೊಂದರೆ ಇರಲಿಲ್ಲ. ಅನುಮಾನಾಸ್ಪದವಾಗಿ ಮೃತ ಪಟ್ಟಲ್ಲಿ ಎಫ್ ಎಸ್ ಎಲ್ ವರದಿ ತರಿಸಿಕೊಳ್ಳುತ್ತೇವೆ. ಸಾಧಾರಣವಾಗಿ ಮರಣ ಹೊಂದಿದಲ್ಲಿ ಎಫ್ ಎಸ್ ಎಲ್ ವರದಿ ತರಿಸಿಕೊಳ್ಳುವುದಿಲ್ಲ. ರಂಗಸ್ವಾಮಿ ಸಾಧಾರಣವಾಗಿ ಮರಣ ಹೊಂದಿದ್ದರಿಂದ ನಾನು ಎಫ್ ಎಸ್ ಎಲ್ ವರದಿಗೆ ಕಳುಹಿಸಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಅನುಮಾನವಿದ್ದಲ್ಲಿ ಮಾತ್ರ ಕಳುಹಿಸುತ್ತೇವೆ ಎಂದು ನುಡಿಯುತ್ತಾರೆ. ಇಂತದೇ ಕಾರಣಕ್ಕೆ ಮರಣ ಹೊಂದಿದಲ್ಲಿ ಕಾರಣವನ್ನು ದೃಢೀಕರಿಸಲು ಎಫ್ ಎಸ್ ಎಲ್ ಗೆ ಕಳುಹಿಸಬೇಕು ಎಂದರೆ ನಿಜ. ಸಾಕ್ಷಿ ಮುಂದುವರೆದು ಕಿಡ್ನಿ , ಲಿವರ್ ಲಂಗ್ಸ್ ನಲ್ಲಿ ತೊಂದರೆ ಇದ್ದಲ್ಲಿ ಮಾತ್ರ ಕಳುಹಿಸಿಕೊಡುತ್ತೇವೆ ಎಂದು ನುಡಿಯುತ್ತಾರೆ. ರಂಗಸ್ವಾಮಿಯವರ ರಕ್ತ ಪರೀಕ್ಷೆಯನ್ನು ಎಫ್ ಎಸ್ ಎಲ್ ವರದಿಗೆ ಕಳುಹಿಸದೇ ಇದ್ದರೂ ಸಹ ಅರ್ಜಿದಾರರಿಗೆ ಸಹಾಯ ಮಾಡಲು ಇನ್ ಫೆಕ್ಷನ್ ನಿಂದ ಮೃತ ಪಟ್ಟಿದ್ದಾರೆ ಎಂದು ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು .**

ಪಿ ಡಬ್ಲು – 2

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಹಿರಿಯೂರು